# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರವಿಕುಮಾರ್. ಎನ್ ಇವರ ನಿಯಮ 72ರಡಿ ಗಮನ ಸೆಳೆಯುವ ಸೂಚನೆಗೆ ಉತ್ತರ.

**ನಿಯಮ 72ರಡಿಯಲ್ಲಿ ಗಮನ ಸೆಳೆಯುವ ಸೂಚನೆ:-**

ಕಾರ್ಮಿಕ ಇಲಾಖೆಯ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ Menstrual cup ಖರೀದಿಯಲ್ಲಿ ದೊಡ್ಡ ಮಟ್ಟದ ಅವ್ಯವಹಾರವಾಗಿದ್ದು ಪ್ರತೀ ಜಿಲ್ಲೆಯಲ್ಲೂ ಒಂದೇ ಸಂಖ್ಯೆಯ ನೋಂದಾಯಿತ ಮಹಿಳಾ ಕಾರ್ಮಿಕರಿಗೆ Menstrual cup ವಿತರಿಸಲು ಹಾಗೂ ಅಷ್ಟೇ ಮೊತ್ತದ ಟೆಂಡರ್ ನೀಡಲು ಕಾರಣವಾದ ಅಂಶಗಳ ಕುರಿತು ಸರ್ಕಾರದ ಗಮನ ಸೆಳೆಯಲು ಅವಕಾಶ ನೀಡುವಂತೆ ವಿನಂತಿಸುತ್ತೇನೆ.

**ಉತ್ತರ:-**

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ನೋಂದಾಯಿತ ಮಹಿಳಾ ಕಾರ್ಮಿಕರು ಹಾಗೂ ಫಲಾನುಭವಿಗಳ ಕುಟುಂಬದ ಸದಸ್ಯರಿಗೆ ಕಾರ್ಮಿಕರಿಗೆ Menstrual cup ವಿತರಿಸಲು ಮಂಡಳಿಯ 42ನೇ ಸಭೆಯ ತೀರ್ಮಾನ ಹಾಗೂ ಸರ್ಕಾರದ ಅನುಮೋದನೆಯನ್ವಯ ಕಾರ್ಮಿಕ ಇಲಾಖೆಯ 11 ವಿಭಾಗವಾರು ಟೆಂಡರ್ ಕರೆಯಲಾಗಿರುತ್ತದೆ. ಈ 11 ವಿಭಾಗದಲ್ಲಿ ನೋಂದಾಯಿತ ಮಹಿಳಾ ಕಾರ್ಮಿಕರ ಸಂಖ್ಯೆಗೆ ಅನುಗುಣವಾಗಿ ಈ ಕೆಳಕಂಡಂತೆ ಟೆಂಡರ್ ಕರೆಯಲಾಗಿರುತ್ತದೆ.

| ವಿಭಾಗ | ಕಿಟ್‌ಗಳ ಸಂಖ್ಯೆ | ಅಂದಾಜು ಮೊತ್ತ (ರೂ.ಕೋಟಿಗಳಲ್ಲಿ) |
|---|---:|---:|
| ಚಿಕ್ಕಮಗಳೂರು | 75000 | 2.10 |
| ಬೆಳಗಾವಿ | 200000 | 5.60 |
| ಬೆಂಗಳೂರು ವಿಭಾಗ-01 | 80000 | 2.24 |
| ಬೆಂಗಳೂರು ವಿಭಾಗ-02 | 55000 | 1.54 |
| ಬೆಂಗಳೂರು ವಿಭಾಗ-03 | 100000 | 2.80 |
| ಬೆಂಗಳೂರು ವಿಭಾಗ-04 | 70000 | 1.96 |
| ಕಲಬುರಗಿ | 350000 | 9.80 |
| ಧಾರವಾಡ | 235000 | 6.58 |
| ಬಳ್ಳಾರಿ | 135000 | 3.78 |
| ಮಂಗಳೂರು | 65000 | 1.82 |
| ಮೈಸೂರು | 45000 | 1.26 |
| **ಒಟ್ಟು** | **1410000** | **39.48** |

ಕೆಟಿಪಿಪಿ ನಿಯಮಗಳನ್ವಯ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮುಕ್ತ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ. ಸಂಪೂರ್ಣ ಟೆಂಡರ್ ಪ್ರಕ್ರಿಯೆಯಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳಲಾಗಿದ್ದು, ಯಾವುದೇ ಅವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

**ಕಾಇ 40 ಎಲ್‌ಇಟಿ 2026**

**(ಸಂತೋಷ್ ಎಸ್. ಲಾಡ್)**
**ಕಾರ್ಮಿಕ ಸಚಿವರು**